# ಡಿ.ಜೆ.ಹಳ್ಳಿ ಹಿಂಸಾಚಾರದ ಕೋಮುವಾದೀಕರಣ

## ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿಯಲ್ಲಿ ಸಂಭವಿಸಿದ ಹಿಂಸಾಚಾರ ಮತ್ತು ತದನಂತರದ ಘಟನೆಗಳ ಕುರಿತು ಬೆಂಗಳೂರಿನ ನಾಗರಿಕ ಸಮಾಜ ಸಂಘಟನೆಗಳು ನೀಡಿರುವ ಸತ್ಯ ಶೋಧನಾ ವರದಿಯ ಸಾರಾಂಶ

*'ಪೋಸ್ಟ್ ಹಾಕಿದವರು ಯಾರೇ ಆಗಿರಲಿ, ಅದು ತಪ್ಪು. ದೂರು ದಾಖಲಿಸದೆ ಇರುವುದೂ ತಪ್ಪು. ಹಿಂಸಾಚಾರವೂ ತಪ್ಪು.'*

***ಸಮೀನಾ, ಸ್ಥಳೀಯ ನಿವಾಸಿ, ಕಾವಲ್ ಭೈರಸಂದ್ರ***

### ಕ್ರಿಯೆ, ಪ್ರತಿಕ್ರಿಯೆ ಮತ್ತು ತದನಂತರದ ಘಟನೆಗಳು:

2020ರ ಆಗಸ್ಟ್ 11ರಂದು ಸಂಜೆ 5:45ಕ್ಕೆ ಕಾವಲ್ ಭೈರಸಂದ್ರದ ನಿವಾಸಿ ಮತ್ತು ಶಾಸಕ ಅಖಂಡ ಶ್ರೀನಿವಾಸಮೂರ್ತಿಯವರ ಸೋದರಳಿಯ ಪಿ. ನವೀನ್‌ಕುಮಾರ್ ಪ್ರಚೋದನಕಾರಿಯಾದ ಚಿತ್ರವೊಂದನ್ನು ಫೇಸ್ಬುಕ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಅದು ಅದೇ ದಿನ ದೇವರಜೀವನಹಳ್ಳಿ (ಡಿ.ಜೆ.ಹಳ್ಳಿ) ಮತ್ತು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹಿಂಸಾಚಾರ ಸೇರಿದಂತೆ ಸರಣಿ ಘಟನೆಗಳಿಗೆ ಕಾರಣವಾಯಿತು. ಆ ಚಿತ್ರವನ್ನು ಪೋಸ್ಟ್ ಮಾಡಿದ ಕೆಲಹೊತ್ತಿನಲ್ಲೇ, ಅಂದರೆ ಸಂಜೆ 7.00–7.30ರ ಒಳಗಾಗಿ ಆತನ ವಿರುದ್ಧ ಎರಡು ಗುಂಪುಗಳು ಈ ಎರಡು ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕವಾಗಿ ಎರಡು ದೂರು ದಾಖಲಿಸಿದವು. ನವೀನ್ ವಿರುದ್ಧ ಎಫ್‌ಐಆರ್ (ಪ್ರಥಮ ವರ್ತಮಾನ ವರದಿ) ದಾಖಲಿಸಲು ಮತ್ತು ಆತನ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರು ವಿಳಂಬ ಮಾಡುತ್ತಿರುವುದನ್ನು ಗ್ರಹಿಸಿದ ಜನರು ಪೊಲೀಸ್ ಠಾಣೆಗಳ ಎದುರು ಜಮಾಯಿಸಿದರು. ಮತ್ತು ಅಲ್ಲಿ ಜನಸಂದಣಿ ಹೆಚ್ಚುತ್ತ ಹೋಯಿತು. ರಾತ್ರಿ 8:00 ಗಂಟೆಗೆ ಸುಮಾರು 200–300 ಜನರ ಗುಂಪೊಂದು ಕಾವಲಭೈರಸಂದ್ರದಲ್ಲಿ ಸೇರಿಕೊಂಡು ನವೀನ್ ಮನೆಯ ಮೇಲೆ ದಾಳಿಗೈದು, ಅದೇ ರಾತ್ರಿ 9:15–10:00 ಗಂಟೆಯ ನಡುವೆ ಶಾಸಕ ಅಖಂಡ ಶ್ರೀನಿವಾಸಮೂರ್ತಿಯವರ ಮನೆಯ ಮೇಲೆರಗಿತು. ಈ ನಡುವೆ ಪೊಲೀಸ್ ಠಾಣೆಗಳಲ್ಲಿ ಜಮಾಯಿಸಿದ್ದ ಜನಸ್ತೋಮವು ಹಿಂಸಾಚಾರಕ್ಕೆ ಇಳಿದು, ಠಾಣೆಗಳು, ವಾಹನಗಳು ಮತ್ತು ಪೊಲೀಸರ ಮೇಲೆ ದಾಳಿ ಮಾಡಿದ್ದಲ್ಲದೆ ಬೆಂಕಿ ಹಚ್ಚುವ ಕೃತ್ಯಕ್ಕೂ ಇಳಿಯಿತು. ಮೊದಲು ಕ್ರಮ ಕೈಗೊಳ್ಳಲು ತಡಮಾಡಿದ ಪೊಲೀಸರು ನಂತರ ಡಿ.ಜೆ.ಹಳ್ಳಿಯಲ್ಲಿ ಫೈರಿಂಗ್ ಆರಂಭಿಸಿದರು; ಪೊಲೀಸರ ಗೋಲಿಬಾರ್‌ನಲ್ಲಿ ನಾಲ್ಕು ಯುವಕರು ಜೀವ ಕಳೆದುಕೊಂಡರು. ಕಾವಲ್‌ಭೈರಸಂದ್ರದಲ್ಲಿ ಮಧ್ಯರಾತ್ರಿ 12.30ರವರೆಗೆ ಮುಂದುವರೆದ ಹಿಂಸಾಚಾರವನ್ನು ಗರುಡ ಪಡೆಗಳು ಧ್ವಜ ಮೆರವಣಿಗೆ ನಡೆಸಿ ನಿಲ್ಲಿಸುವ ತನಕ ಗಲಭೆಕೋರರು ಮನಸೋಇಚ್ಛೆ ಖಾಸಗಿ ಆಸ್ತಿಪಾಸ್ತಿಗಳ ಮೇಲೆ ದಾಳಿ ಮಾಡಿದರು.

2020ರ ಆಗಸ್ಟ್ 12ರಂದು ಘಟನೆ ಸಂಭವಿಸಿದ ತಕ್ಷಣವೇ ಸೆಕ್ಷನ್ 144ರ ಅಡಿಯಲ್ಲಿ ನಿಷೇಧಾಜ್ಞೆ ವಿಧಿಸಲಾಯಿತು. ನಿಖರ ಸಂಖ್ಯೆ ಇನ್ನೂ ಸಿಗದಿದ್ದರೂ ಈಗ ಲಭ್ಯವಿರುವ ಮಾಹಿತಿಯಂತೆ, ಎರಡು ಪೊಲೀಸ್ ಠಾಣೆಗಳಲ್ಲಿ 68 ಎಫ್‌ಐಆರ್‌ಗಳನ್ನು ದಾಖಲಿಸಿಕೊಂಡು ಸುಮಾರು 400–500 ಜನರನ್ನು ಬಂಧಿಸಲಾಯಿತು. ನಡುರಾತ್ರಿಯ ನಂತರ ನಡೆದ ಬಂಧನಗಳು ಆ ಪ್ರದೇಶದ ಜನರಲ್ಲಿ ಭಯ ಮತ್ತು ಆತಂಕವನ್ನು ಸೃಷ್ಟಿಸಿತು.

### ಸತ್ಯ ಶೋಧನಾ ಪ್ರಕ್ರಿಯೆ: ಉದ್ದೇಶ, ಕಾರ್ಯವಿಧಾನ ಮತ್ತು ಕಾಳಜಿ

ಈ ಘಟನೆ ಮತ್ತು ತದನಂತರದ ಪರಿಣಾಮಗಳ ಬಗ್ಗೆ ವಿಚಾರಣೆ ನಡೆಸಲು ಸಂಶೋಧಕರು, ನಾಗರಿಕ ಸಮಾಜದ ಹೋರಾಟಗಾರರು, ಮಾನವ ಹಕ್ಕು ಸಂಘಟನೆಗಳ ಕಾರ್ಯಕರ್ತರು ಮತ್ತು ವಕೀಲರನ್ನೊಳಗೊಂಡ ಒಟ್ಟು ಇಪ್ಪತ್ತಾಲ್ಕು ಸದಸ್ಯರ ತಂಡವೊಂದು 2020ರ ಆಗಸ್ಟ್ 20ರಿಂದ ಸೆಪ್ಟೆಂಬರ್ 1ರವರೆಗೆ ದೇವರಜೀವನಹಳ್ಳಿ, ಕಾಡುಗೊಂಡನಹಳ್ಳಿ ಮತ್ತು ಕಾವಲ್‌ಭೈರಸಂದ್ರ ಪ್ರದೇಶಗಳಿಗೆ ಭೇಟಿ ಕೊಟ್ಟಿತು. ಸತ್ಯ ಶೋಧನೆಯ ಕುರಿತು ಪ್ರಕಟಣೆಯನ್ನು ನೀಡಿ, ಮಾಧ್ಯಮಗಳ ಮೂಲಕ ಸಾಕಷ್ಟು ಪ್ರಚಾರ ಮಾಡಲಾಯಿತು. ಸಾರ್ವಜನಿಕವಾಗಿ ಇ-ಮೇಲ್ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ನೀಡಿ, ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇದ್ದರೂ ಅವುಗಳ ಮೂಲಕ ಒದಗಿಸುವಂತೆ ಕೋರಲಾಯಿತು. ತಂಡದ ಮುಖ್ಯ ಉದ್ದೇಶ ಹೀಗಿತ್ತು: 2020ರ ಆಗಸ್ಟ್ 11ರ ರಾತ್ರಿ ಸಂಭವಿಸಿದ ಘಟನೆಗಳು ಮತ್ತವುಗಳ ಹಿನ್ನೆಲೆ ಏನೆಂದು ಅರ್ಥಮಾಡಿಕೊಳ್ಳುವುದು, ಘಟನೆಯ ಮೇಲೆ ಬೆಳಕು ಚೆಲ್ಲುವುದು ಹಾಗೂ

ಪೊಲೀಸ್ ಠಾಣೆಗಳಲ್ಲಿ ಹಿಂಸಾಚಾರ ಜರುಗಲು ಕಾರಣವಾದ ಮತ್ತು ಅದರ ಪರಿಣಾಮವಾಗಿ ಈ ಪ್ರದೇಶಗಳಲ್ಲಿ ನಡೆದ ಹಿಂಸಾಚಾರ, ದಾಳಿಗಳು ಮತ್ತು ಬಂಧನಗಳ ಬಗ್ಗೆ ಸತ್ಯಾಂಶಗಳನ್ನು ದಾಖಲಿಸುವುದು. ಇದಕ್ಕೆ ಪೂರಕವಾಗಿ ತಂಡವು ಘಟನೆಗೆ ಸಂಬಂಧಿಸಿದಂತೆ ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳು ವಹಿಸಿದ ಪಾತ್ರವನ್ನು ಶೋಧಿಸಿತಲ್ಲದೆ, ಹಿಂಸಾಚಾರ ಸಂಭವಿಸಿದ ಪ್ರದೇಶದ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಸ್ಥೂಲವಾಗಿ ಅರ್ಥಮಾಡಿಕೊಳ್ಳಲು ಯತ್ನಿಸಿತು.

ಯಾವುದೇ ಪಕ್ಷಪಾತವಿಲ್ಲದೆ ಸತ್ಯದ ಅನಾವರಣ ಮಾಡುವುದು ಹಾಗೂ ಪ್ರಚೋದನೆ ಮತ್ತು ಹಿಂಸಾಚಾರ ಇವೆರಡನ್ನೂ ಸಾಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಚೌಕಟ್ಟಿನೊಳಗೆ ಗ್ರಹಿಸುವುದು ನಮ್ಮ ಕಾಳಜಿಯಾಗಿತ್ತು. ಇಂತಹ ಸಂಘರ್ಷಮಯ ಪರಿಸ್ಥಿತಿಗಳಲ್ಲಿ ಸತ್ಯ ಶೋಧನೆ ನಡೆಸುವುದು ತಂತಿ ಮೇಲಿನ ನಡಿಗೆಯೇ ಆಗಿದೆ ಎಂಬುದರ ಅರಿವು ನಮಗಿದೆ. ಅಲ್ಲದೆ ಕಾನೂನುಭಂಜಕರನ್ನು ಹೊಣೆಗಾರರನ್ನಾಗಿಸುತ್ತಲೇ, ಹಿಂಸಾಚಾರದಿಂದ ಸಂತ್ರಸ್ತರಾದವರಿಗೆ ಸಾಂತ್ವನ ನೀಡಿ, ಪರಿಹಾರ ಕಲ್ಪಿಸುವಾಗ ಸಾಮಾಜಿಕ ನ್ಯಾಯ ಮತ್ತು ಶಾಂತಿಯನ್ನು ಮರುಸ್ಥಾಪಿಸಬೇಕಾಗುತ್ತದೆ. ಇಂತಹ ಕೆಲಸವು ಅಸಾಧಾರಣ ಎಚ್ಚರಿಕೆ ಮತ್ತು ಸಂವೇದನಾಶೀಲತೆಯನ್ನು ಬೇಡುತ್ತದೆ. ಆದ್ದರಿಂದ, ಗ್ರಹಿಕೆಯಲ್ಲಿರುವಷ್ಟೇ ಶ್ರದ್ಧೆ ಈ ಕೃತ್ಯದಲ್ಲೂ ಇರಬೇಕಾಗುತ್ತದೆ ಎಂಬುದನ್ನು ನಾವು ಬಲ್ಲೆವು. ಎಲ್ಲಾ ಮತಗಳಿಗೂ ಸೇರಿದ ಜನರಿಗೆ ಇದೊಂದು ಸವಾಲಾಗಿ ಪರಿಣಮಿಸಲಿದೆ ಎಂಬ ಅಂಶವನ್ನು ಈ ಸತ್ಯ ಶೋಧನಾ ಕಾರ್ಯವನ್ನು ನಡೆಸುವಾಗ ನಾವು ಮನಗಂಡೆವು; ಅದರಲ್ಲೂ ನಮ್ಮ ಸಂವಿಧಾನದ ಪ್ರಜಾಸತ್ತಾತ್ಮಕ ಮತ್ತು ಬಹುತ್ವದ ಗುಣವನ್ನು ಸಂರಕ್ಷಿಸಿ ಎತ್ತಿಹಿಡಿಯುವಂತಹ ಸಾಂವಿಧಾನಿಕ ಕರ್ತವ್ಯ ಹೊಂದಿರುವ ಹಿಂದೂ ಮತ್ತು ಮುಸ್ಲಿಮ್ ಇಬ್ಬರಿಗೂ ಈ ಪ್ರಕರಣದಲ್ಲಿ ಇದು ವಿಶೇಷವಾಗಿ ಅನ್ವಯಿಸುತ್ತದೆ. ಪ್ರಭುತ್ವ ಮತ್ತದರ ಹಲವು ಅಂಗಗಳನ್ನು ಹೊಣೆಗಾರರನ್ನಾಗಿಸುವ ಮತ್ತು ಅದರ ತಪ್ಪು ಒಪ್ಪುಗಳ ಜವಾಬ್ದಾರಿಯನ್ನು ಅದರ ಮೇಲೆ ಹೊರಿಸುವ ಉದ್ದೇಶದಿಂದ, ಅಲ್ಲದೇ ಸಂಘರ್ಷಮಯ ಸಂದರ್ಭಗಳಲ್ಲಿ ಶಾಂತಿ ಮತ್ತು ನ್ಯಾಯವನ್ನು ಖಾತ್ರಿಪಡಿಸಲು ಹಾಗೂ ವಿವಿಧ ಜನಸಮುದಾಯಗಳ ಒಳಗೂ ಅವುಗಳ ನಡುವೆಯೂ ಪ್ರಜಾಸತ್ತಾತ್ಮಕ ಸಂವಾದಗಳ ಪ್ರಕ್ರಿಯೆಯನ್ನು ಆರಂಭಿಸುವ ಸಲುವಾಗಿ ಈ ವರದಿಯನ್ನು ಸರ್ಕಾರಕ್ಕೆ ಮತ್ತು ನಾಗರಿಕರಿಗೆ ಸಲ್ಲಿಸಲಾಗುತ್ತದೆ.

**ತಂಡ ಭೇಟಿ ಮಾಡಿದ ಜನರು:** ಪೊಲೀಸರ ಗುಂಡೇಟಿಗೆ ಬಲಿಯಾದವರ ಕುಟುಂಬಗಳು, ಗಾಯಗೊಂಡವರು, ಬಂಧನಕ್ಕೊಳಗಾದವರು ಹಾಗೂ ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳಿಂದ ಬಾಧಿತರಾದವರನ್ನು ಹಾಗೂ ಕುಟುಂಬಗಳನ್ನು ಧರ್ಮಾತೀತವಾಗಿ ಭೇಟಿ ಮಾಡಲಾಯಿತು. ಅಲ್ಲದೇ ಅಂಗಡಿ ಮುಂಗಟ್ಟುಗಳು, ವ್ಯಾಪಾರಸ್ಥರು, ಕಿರಾಣಿ ಅಂಗಡಿಗಳು, ಮನೆಗೆಲಸಗಾರರು, ಪರಿಹಾರಕಾರ್ಯದಲ್ಲಿ ತೊಡಗಿರುವ ಸಂಘಟನೆಗಳು, ಧಾರ್ಮಿಕ ನಾಯಕರು ಮತ್ತು ರಾಜಕೀಯ ಪ್ರತಿನಿಧಿಗಳು ಸೇರಿದಂತೆ ಜನಸಮುದಾಯದ ಮುಖಂಡರು, ಘಟನೆಯಲ್ಲಿ ಗಾಯಗೊಂಡಿದ್ದ ಮಾಧ್ಯಮ ಪ್ರತಿನಿಧಿಗಳು, ಡಿಸಿಪಿಗಳು, ಎಸಿಪಿ ಸೇರಿದಂತೆ ಸ್ಥಳೀಯ ಪೊಲೀಸ್ ಠಾಣೆಗಳ ಪೊಲೀಸ್ ಅಧಿಕಾರಿಗಳು, ನವೀನ್ ಕುಟುಂಬ, ಸ್ಥಳೀಯ ದಲಿತ ಸಂಘಟನೆಗಳು ಮತ್ತು ನವೀನ್ ಹಾಕಿದ್ದ ಪೋಸ್ಟ್‌ನ್ನು ವಿರೋಧಿಸಿ ಆರಂಭಿಕ ದೂರು ಸಲ್ಲಿಸಿದ್ದ ಸಂಘಗಳನ್ನೂ ಭೇಟಿ ಮಾಡಲಾಯಿತು. ತಂಡವು ಆಯುಕ್ತರನ್ನು ಭೇಟಿಯಾಗಲು ಪ್ರಯತ್ನಿಸಿತು ಮತ್ತು ಗಾಯಗೊಂಡವರನ್ನು ಒಯ್ದಿದ್ದ ಆಸ್ಪತ್ರೆಗೂ ಹೋಗಿಬರಲು ಯತ್ನಿಸಿತು. ಜನಪ್ರತಿನಿಧಿಗಳನ್ನೂ, ಘಟನೆ ಮತ್ತು ತದನಂತರದ ಪರಿಣಾಮಗಳಿಗೆ ಸಾಕ್ಷಿಯಾದ ಎಲ್ಲ ಜನರನ್ನೂ ಸಂಘಟನೆಗಳನ್ನೂ ಮಾತನಾಡಿಸಲು ಪ್ರಯತ್ನಪಡಲಾಗಿದೆ.

**ಸತ್ಯ ಶೋಧನೆಯ ಸಾರಾಂಶ**

ಘಟನೆಯ ಬಗ್ಗೆ ಪೂರ್ಣ ವಿಚಾರಣೆ ನಡೆಸಿ, ಹಲವಾರು ಪ್ರಮಾಣಿತ ಹೇಳಿಕೆಗಳನ್ನು ದಾಖಲಿಸಿಕೊಂಡು, ವಿವಿಧ ಜನರಿಂದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ ಸತ್ಯಶೋಧನಾ ಸಮಿತಿಯು ಈ ವಾಸ್ತವ ಸಂಗತಿಗಳನ್ನು ಕಂಡುಕೊಂಡಿದೆ:

**ಅ) ಫೇಸ್‌ಬುಕ್ ಪೋಸ್ಟ್:** ನವೀನ್ ಹಾಕಿರುವ ಪೋಸ್ಟ್, ವಾಕ್ ಸ್ವಾತಂತ್ರ್ಯಕ್ಕೆ ಸಂವಿಧಾನ ಒದಗಿಸಿರುವ ರಕ್ಷಣೆಯ ವ್ಯಾಪ್ತಿಯನ್ನು ಮೀರುತ್ತದೆಯಲ್ಲದೆ, ಅದು ಮುಸ್ಲಿಮ್ ಸಮುದಾಯದ ವಿರುದ್ಧ ದ್ವೇಷ ಕಾರುತ್ತದೆ. ಪ್ರಚೋದನೆ ಮಾಡುವುದೇ ಅದರ ಉದ್ದೇಶವಾಗಿತ್ತು ಎಂಬುದು ಸ್ಪಷ್ಟವಾಗಿದ್ದರೂ, ಆ ಪೋಸ್ಟ್ ಹಾಕುವುದರ ಹಿಂದೆ ಆತನಿಗಿದ್ದ ಉದ್ದೇಶ ಮತ್ತು ಪ್ರೇರಣೆ ಏನೆಂಬುದರ ಬಗ್ಗೆ ಪೊಲೀಸರು ತನಿಖೆ ಮಾಡುವುದಾಗಲೀ ಮಾಧ್ಯಮಗಳು ಗಮನ ಹರಿಸುವುದಾಗಲೀ ನಡೆದಿಲ್ಲ. ಅದರ ಬದಲಿಗೆ ಮಾಧ್ಯಮಗಳು ಎದ್ದುಕಾಣುವಂತಹ ಮತ್ತು ಉದ್ರೇಕಗೊಳಿಸುವಂತಹ ಹಿಂಸಾಚಾರದ ಬಗ್ಗೆ ಮಾತ್ರ ಗಮನವನ್ನು ಹೆಚ್ಚು ಕೇಂದ್ರೀಕರಿಸಿವೆ.

**ಆ) ಗುಂಪು ಹಿಂಸಾಚಾರ:** ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಪೊಲೀಸ್ ಠಾಣೆಗಳ ಮೇಲಿನ ದಾಳಿಯಲ್ಲಿ, ನವೀನ್ ಮತ್ತು ಅಖಂಡ ಶ್ರೀನಿವಾಸಮೂರ್ತಿಯವರ ಮನೆಗಳ ಮೇಲಿನ ದಾಳಿ ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳ ಧ್ವಂಸದಲ್ಲಿ, ಹಾಗೂ ಹಿಂಸಾ ಕೃತ್ಯಗಳಲ್ಲಿ ಗಲಭೆಕೋರ ಗುಂಪುಗಳ ಪಾತ್ರವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮತ್ತು ಅದನ್ನು ಯಾರೂ ಒಪ್ಪುವಂತಹದ್ದೂ ಅಲ್ಲ. ಪೊಲೀಸರ ಗುಂಡೇಟಿಗೆ ಮೂರು ಜೀವಗಳು ಸ್ಥಳದಲ್ಲೇ ಆಹುತಿಯಾದವು, ಇನ್ನೊಬ್ಬ ವ್ಯಕ್ತಿ ಗುಂಡೇಟಿನಿಂದ ನಂತರದಲ್ಲಿ ಸಾವನ್ನಪ್ಪಿದರೆ, ಪೊಲೀಸರು ಸೇರಿದಂತೆ ಇನ್ನೂ ಹಲವು ಜನರು ಗಾಯಗೊಂಡರು. ಆದರೆ ಗಲಭೆಕೋರ ಗುಂಪನ್ನು ಕಣ್ಣಿಗೆ ಕಾಣುವ ಯಾವ ನಾಯಕತ್ವವೂ ನಿರ್ದೇಶನ ಮಾಡಿದಂತೆ ಕಾಣುತ್ತಿರಲಿಲ್ಲ ಎಂಬುದು ಸಮಿತಿಯ ಗಮನಕ್ಕೆ ಬಂದ ಅಂಶ. ಹಿಂಸಾಚಾರವನ್ನು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಎಂದು ಪರಿಗಣಿಸಿ ಅದಕ್ಕೆ ಸೂಕ್ತ ವಿಧಿವಿಧಾನಗಳನ್ನು ಅನುಸರಿಸಬೇಕು. ಇದರೊಂದಿಗೆ ಆರೋಪಿಗಳ ಹಕ್ಕುಗಳನ್ನೂ ಗೌರವಿಸಬೇಕಾಗುತ್ತದೆ. ಮೂಲಭೂತ ಮಾನವ ಹಕ್ಕುಗಳು ಮತ್ತು ಸಾಮಾಜಿಕ ಸಾಮರಸ್ಯ ಮತ್ತಷ್ಟು ಕುಸಿಯದಂತೆ ಮತ್ತು ಉಲ್ಲಂಘನೆಯಾಗದಂತೆ ಇವೆಲ್ಲವನ್ನೂ ಸಂವೇದನಾಶೀಲತೆ ಮತ್ತು ಎಚ್ಚರಿಕೆಯಿಂದ ನಿಭಾಯಿಸಬೇಕಾಗುತ್ತದೆ. ಸಮುದಾಯದಲ್ಲಿ ನಾವು ಮಾತನಾಡಿಸಿದವರೆಲ್ಲರೂ ಹಿಂಸಾಚಾರವನ್ನು ಖಂಡಿಸಿ, ಅದು ಅನಗತ್ಯವಾಗಿತ್ತೆಂದೂ ಅದರ ಪರಿಣಾಮವೇ ಅನೇಕ ಅಮಾಯಕರು ಈಗ ಬೆಲೆ ತೆರುತ್ತಿರುವುದು ಎಂದು ಹೇಳಿದರೂ ಸಹ ದುರದೃಷ್ಟವಶಾತ್, ಈ ಧ್ವನಿಗಳ ಮೇಲೆ ನಂಬಿಕೆ ವಿಶ್ವಾಸಗಳನ್ನು ಇರಿಸದೆ ಹೋಗಿದ್ದು ಇಡೀ ಸಮುದಾಯವನ್ನೇ ಒಟ್ಟಾರೆ ಅಪರಾಧಿಗಳಂತೆ ನೋಡುವ ಮತ್ತು ಸೈತಾನರಂತೆ ಕಾಣುವ ಬೃಹತ್ ಕಾರ್ಯಸೂಚಿಯ ಭಾಗವಾಗಿದೆ ಎಂಬುದು ನಮ್ಮ ಅಭಿಮತವಾಗಿದೆ.

**ಇ) ಪೊಲೀಸರ ವೈಫಲ್ಯ:** ಫೇಸ್‌ಬುಕ್ ಪೋಸ್ಟ್ ಬಗ್ಗೆ ದೂರು ಬಂದ ಕೂಡಲೇ ಪೊಲೀಸರು ಕ್ರಮಕೈಗೊಳುವಲ್ಲಿ ವಿಫಲರಾಗಿದ್ದು, ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಮತ್ತು ಕಾವಲ್‌ಭೈರಸಂದ್ರಗಳಲ್ಲಿ ಹಿಂಸಾಚಾರ ಹೆಚ್ಚುವುದನ್ನು ತಡೆಗಟ್ಟುವಲ್ಲೂ ಅವರು ವಿಫಲರಾದರು. ಎಫ್‌ಐಆರ್ ದಾಖಲಿಸಲು ಆದ ವಿಳಂಬ, ಕಟ್ಟುನಿಟ್ಟಿನ ಕಾನೂನು ಕ್ರಮ ತೆಗೆದುಕೊಳ್ಳದೆ ಇರುವುದು, ಇದು ಶಾಸಕರ ಹಸ್ತಕ್ಷೇಪದಿಂದ ನಡೆದಿದೆ ಎಂಬ ಗ್ರಹಿಕೆಯನ್ನು ಮೂಡಿಸುತ್ತದೆ ಮತ್ತು ಅದನ್ನು ಅಲಕ್ಷಿಸಲಾಗದು. ಪರಿಸ್ಥಿತಿ ಕೈಮೀರಿ ಹೋಗುವ ಮುನ್ನವೇ ಗಲಭೆಕೋರರನ್ನು ಚದುರಿಸಬಲ್ಲ ಹೆಚ್ಚುವರಿ ಪಡೆಗಳನ್ನು ತುರ್ತಾಗಿ ಕರೆಸಿಕೊಳ್ಳುವುದರ ಜೊತೆಗೆ ಪೊಲೀಸರು ಇತರ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಪೊಲೀಸರು ಪರಿಸ್ಥಿತಿಗೆ ಕೈಚೆಲ್ಲಿ ಕುಳಿತಂತಿತ್ತು. ಉದಾಹರಣೆಗೆ ಕಾವಲ್‌ಭೈರಸಂದ್ರದಲ್ಲಿ ಪೊಲೀಸ್ ಠಾಣೆಗೆ ಪದೇಪದೇ ಫೋನ್ ಕರೆ ಮಾಡಿದರೂ ಸಹ ಪೊಲೀಸರು ತಡವಾಗಿ ಬಂದರು. ಹಾಗೂ ಹಿಂಸಾಚಾರ ನಡೆದ ಸ್ಥಳಕ್ಕೆ ಬಂದ ಪೊಲೀಸರ ಸಂಖ್ಯೆ ಬಹಳ ಕಡಿಮೆ ಇತ್ತು. ಈ ಘಟನೆಗೆ ಪ್ರಭುತ್ವ ನೀಡಿದ ಪ್ರತಿಕ್ರಿಯೆಯನ್ನು ಗಮನಿಸಿದರೆ ಗುಪ್ತಚರ ಇಲಾಖೆಯ ವೈಫಲ್ಯವು ಗೋಚರಿಸುತ್ತದೆ. ನವೀನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲು ವಿಳಂಬ ಮಾಡಿರುವುದಕ್ಕೆ ಪೊಲೀಸರು ಜವಾಬ್ದಾರರಾಗುತ್ತಾರೆ; ಇದರಿಂದಾಗಿಯೇ ಠಾಣೆಗಳಲ್ಲಿ ಕುಪಿತ ಜನಸ್ತೋಮ ಹೆಚ್ಚೆಚ್ಚು ಜಮಾಯಿಸಿದ್ದು.

**ಈ) ಹಿಂಸಾಚಾರವು ಕೋಮುವಾದ ಪ್ರೇರಿತವೋ ಅಥವಾ ರಾಜಕೀಯ ಪ್ರೇರಿತವೋ; ಪೂರ್ವಯೋಜಿತವೋ, ಪೂರ್ವನಿಯೋಜಿತವೋ, ಸ್ವಯಂಪ್ರೇರಿತವೋ ಇಲ್ಲವೇ ಸಂದರ್ಭಸಾಧಕವೋ?:** ಗಲಭೆಕೋರ ಗುಂಪು ನಡೆಸಿದ ಹಿಂಸಾಚಾರವು ಕೋಮುವಾದಿ ಎಂದು, ಅದು ಹಿಂದು ಸಮುದಾಯವನ್ನು ಗುರಿಯಾಗಿಸಿತ್ತೆಂದು ಅಥವಾ ಅದು ಪೂರ್ವಯೋಜಿತ ಮತ್ತು ಪೂರ್ವನಿಯೋಜಿತ ಎಂದು ಸೂಚಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. ಘಟನೆಗಳು ತೆರೆದುಕೊಂಡ ಪರಿಯನ್ನು ಗಮನಿಸಿದಾಗ ನಮಗೆ ಕಾಣಿಸುವುದೇನೆಂದರೆ ಮತ್ತು ನಾವು ಮಾತನಾಡಿಸಿದವರೆಲ್ಲರೂ ವ್ಯಕ್ತಪಡಿಸಿದ ಅಭಿಪ್ರಾಯವೇನೆಂದರೆ ಇದು ನಿಜಕ್ಕೂ ಒಂದು ಸಹಜವಾದ ಸ್ಥಳೀಯ ಘಟನೆಯೇ ಆಗಿದ್ದು, ಇದನ್ನು ವಿವಿಧ ರಾಜಕೀಯ ಪಕ್ಷಗಳು ಮುಂಬರಲಿರುವ ಮಹಾನಗರಪಾಲಿಕೆ ಚುನಾವಣೆಯೂ ಸೇರಿದಂತೆ ತಮ್ಮ ತಕ್ಷಣದ ರಾಜಕೀಯ ಲಾಭಗಳಿಗೆ ಬಳಸಿಕೊಂಡಿದ್ದಾರೆ. ಹಿಂದು ಮತ್ತು ಕ್ರೈಸ್ತ ಕುಟುಂಬಗಳನ್ನು, ಅವರ ಮನೆಗಳನ್ನು ಮತ್ತು ಹಿಂದುಗಳ ವಾಹನಗಳನ್ನು ರಕ್ಷಿಸುವಲ್ಲಿ ಮುಸ್ಲಿಮ್ ಯುವಕರು ನೆರವಾಗಿದ್ದರೆಂಬುದನ್ನು ಹಲವು ಸಂಘಗಳು ಒಪ್ಪಿಕೊಂಡಿವೆ. ಹನುಮಂತನಗುಡಿ ಮತ್ತು ಪೊಲೀಸ್ ಠಾಣೆಯ ಹೊರಗೆ ಗಲಭೆಕೋರರಿಂದ ರಕ್ಷಿಸುವ ಸಲುವಾಗಿ ಅವರು ಮಾನವ ಸರಪಳಿಯನ್ನು ನಿರ್ಮಿಸಿದರು. ಕಾವಲ್‌ಭೈರಸಂದ್ರದಲ್ಲಿ ಮುಸಲ್ಮಾನರೊಬ್ಬನಿಗೆ ಸೇರಿದ ಆಸ್ತಿಯನ್ನು ಧ್ವಂಸಗೊಳಿಸಿ ನಾಶ ಮಾಡಲಾಯಿತು; ಮುಸ್ಲಿಮರಿಗೆ ಸೇರಿದ ವಾಹನಗಳಿಗೂ ಬೆಂಕಿ ಹಚ್ಚಲಾಯಿತು; ಈ ಬಗ್ಗೆ ಪೊಲೀಸರಲ್ಲಿ ದೂರು ದಾಖಲಾಗಿದೆ. ಕೆಲವು ವ್ಯಕ್ತಿಗಳನ್ನು ಮತ್ತು ಹಿಂದುಗಳ ಮನೆಗಳನ್ನು ಮನಸೋಇಚ್ಛೆ ದಾಳಿಗೈದಿದ್ದರೆ, ಕೆಲವು ಕುಟುಂಬಗಳ ಮೇಲೆ ವೈಯಕ್ತಿಕ ಸೇಡು ತೀರಿಸಿಕೊಳ್ಳಲೂ ಈ ಸಂದರ್ಭವನ್ನು ಬಳಸಿಕೊಳ್ಳಲಾಗಿದೆ ಎಂಬ ಅಭಿಪ್ರಾಯವಿದೆ. ಗಲಭೆಯಲ್ಲಿ ಮನೆಗಳಿಗೆ ಧಕ್ಕೆಯಾಗಿರುವ ಅನೇಕ ಹಿಂದು ಕುಟುಂಬಗಳವರು ತಮ್ಮ ಆಸ್ತಿಪಾಸ್ತಿಯನ್ನು ರಕ್ಷಿಸಲು ನೆರವಾಗಿದ್ದು ಸ್ಥಳೀಯ

ಮುಸ್ಲಿಮ್ ಕುಟುಂಬಗಳೇ ಎಂದು ಹೇಳಿದವು. ಅಧಿಕ ಸಂಖ್ಯೆಯ ಹಿಂದುಗಳಿರುವ ಒಂದು ಪುಟ್ಟ ಓಣಿಯನ್ನು ಗುರಿಯಾಗಿಸಿ ದಾಳಿಗೈದರೂ, ಅದೇ ಪ್ರದೇಶದಲ್ಲಿರುವ ಇತರೆ ಹಿಂದುಗಳ ಮನೆಗಳಿಗೆ ಈ ಹಿಂಸೆ ಹರಡಿಲ್ಲ. ಈ ಪ್ರದೇಶದಲ್ಲಿ ಹಿಂದು – ಮುಸ್ಲಿಮ್ ಕುಟುಂಬಗಳು ಶಾಂತಿ ಮತ್ತು ಸೌಹಾರ್ದತೆಯಿಂದ ಸಹಜೀವನ ನಡೆಸುತ್ತಿದ್ದು, ಕೋಮು ಗಲಭೆಗಳು ನಡೆದಿಲ್ಲ ಎಂದು ಇಲ್ಲಿನ ಬಹುತೇಕ ಜನರು ತಿಳಿಸಿದ್ದು ಇಲ್ಲಿ ಬಹಳ ಮುಖ್ಯವಾಗುತ್ತದೆ. ಆದ್ದರಿಂದ ಇದನ್ನು ಕೋಮುವಾದಿ ಅಥವಾ ಪೂರ್ವಯೋಜಿತ ದಾಳಿ ಎಂದು ರುಜುವಾತು ಮಾಡಲು ಸಾಧ್ಯವಿಲ್ಲ. ಆದರೆ, ಘಟನೆಯ ನಂತರದಲ್ಲಿ ಮಾಧ್ಯಮಗಳು ಕಟ್ಟಿದ ಸುಳ್ಳು ಕಥೆಗಳು ಮತ್ತು ಸರ್ಕಾರ ನೀಡಿದ ಹೇಳಿಕೆಗಳು ಈ ಘಟನೆಗಳಿಗೆ ಹಿಂದುಗಳ ವಿರುದ್ಧದ ನಡೆದ ಕೋಮುವಾದಿ ಕೃತ್ಯ ಎಂದು ಪಟ್ಟ ಕಟ್ಟಿದವು.

**ಉ) ಹಿಂಸಾಚಾರದ ನಂತರ ಪೊಲೀಸರು ಕೈಗೊಂಡ ಕ್ರಮಗಳು:** ಸೆಕ್ಷನ್ 144ರ ಅಡಿಯಲ್ಲಿ ವಿಧಿಸಿದ ನಿಷೇಧಾಜ್ಞೆಯು ಆ ಪ್ರದೇಶಗಳ ಜನರಿಗೆ ಸರ್ವವ್ಯಾಪಿಯಾದ ಶಿಕ್ಷೆಯಾಗಿತ್ತು. ಅವರು ತಮ್ಮ ಮನೆಗಳಿಂದ ಹೊರಹೋಗಲು ಯತ್ನಿಸಿದರೆ ಸಾಕು, ಮೌಖಿಕ ಮತ್ತು ದೈಹಿಕ ಕಿರುಕುಳಕ್ಕೆ ಒಳಗಾಗುತ್ತಿದ್ದರು. ಮಧ್ಯರಾತ್ರಿಯಲ್ಲಿ ಮನಬಂದಂತೆ ಹಲವರನ್ನು ಬಂಧಿಸಲಾಯಿತು. ಇದರಿಂದಾಗಿ ಆ ಪ್ರದೇಶದಲ್ಲಿ ಭಯದ ವಾತಾವರಣ ನಿರ್ಮಾಣವಾಯಿತು. ಬಂಧಿತರಾದವರ ಕುಟುಂಬಗಳಿಗೆ ಬಂಧನದ ಬಗ್ಗೆಯಾಗಲೀ ತಮ್ಮ ಪ್ರೀತಿಪಾತ್ರರು ಎಲ್ಲಿದ್ದಾರೆಂದಾಗಲೀ ಮಾಹಿತಿ ನೀಡಿಲ್ಲ. ನಾಮನಿರ್ದೇಶಿತ ವ್ಯಕ್ತಿಯೊಬ್ಬರಿಗೆ ಮಾಹಿತಿ ನೀಡುವ ಅಥವಾ ಬಂಧನದ ಮೆಮೊ ಸಿದ್ಧಪಡಿಸುವುದಾಗಲೀ ಅನುಸರಿಸಿಲ್ಲ. ಇದು ಆರೋಪಿಯ ಹಕ್ಕುಗಳ ಉಲ್ಲಂಘನೆಯೇ ಸರಿ. ಮುಸ್ಲಿಮ್ ಸಮುದಾಯದ ವಿರುದ್ಧ ಕೋಮುವಾದಿ ನಿರೂಪಣೆಯನ್ನು ಮುಂದುವರೆಸಲು ಮತ್ತು ಎಸ್‌ಡಿಪಿಐನ್ನು ಗುರಿಯಾಗಿಸಲು ಯುಎಪಿಎ ಕಾಯ್ದೆಯ ದುರ್ಬಳಕೆ ಮಾಡಲಾಗುತ್ತಿದೆ ಎಂಬುದಕ್ಕೆ ಈ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯನ್ನು ಅನಗತ್ಯವಾಗಿ ಬಳಕೆ ಮಾಡಿರುವುದು ಸಾಕ್ಷ್ಯ ಒದಗಿಸುತ್ತದೆ. ಹಿಂಸಾಚಾರದಲ್ಲಿ ಹಾನಿಯಾಗಿರುವ ಆಸ್ತಿಪಾಸ್ತಿಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ಆರಂಭಿಸಲು ಕ್ಲೇಮ್ಸ್ ಕಮೀಷನರ್ ನೇಮಕ ಮಾಡಲು ರಾಜ್ಯ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದ ಮೊರೆ ಹೋಯಿತು. ಕರ್ನಾಟಕ ಉಚ್ಚ ನ್ಯಾಯಾಲಯವು ಕ್ಲೇಮ್ಸ್ ಕಮೀಷನರ್ ನೇಮಕ ಮಾಡುವಂತೆ ಆದೇಶ ಹೊರಡಿಸುವಾಗಲೂ, ಎಫ್‌ಐಆರ್‌ಗಳಲ್ಲಿ ಮಾಡಲಾಗಿರುವ ಆಪಾದನೆಗಳು ಸರಿಯೋ ಅಲ್ಲವೋ ಎನ್ನುವುದು ತಮಗೆ ಸಂಬಂಧಪಟ್ಟಿದ್ದಲ್ಲವೆಂದೂ ಅದು ತನಿಖೆ ಮತ್ತು ವಿಚಾರಣೆಗೆ ಸಂಬಂಧಿಸಿದ ವಿಷಯವಾಗಿದೆ ಎಂದೂ ಹೇಳಿದೆ. ಅಪರಾಧ ಪ್ರಕರಣಗಳ ವಿಚಾರಣೆಗಳು ಪೂರ್ಣಗೊಳ್ಳದೆ ಈ ನಷ್ಟ ವಸೂಲಿ ಪ್ರಕ್ರಿಯೆಯನ್ನು ನಡೆಸಲಾಗದು. ಹಾಗೆಮಾಡಿದಲ್ಲಿ ಇದು ಆರೋಪಿಯ ಮೂಲಭೂತ ಹಕ್ಕಾಗಿರುವ ಮುಕ್ತ ಮತ್ತು ನಿಷ್ಪಕ್ಷಪಾತ ವಿಚಾರಣೆಯ ಹಕ್ಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಇವುಗಳ ಮಧ್ಯೆ ಹಾಗೂ ಇದಕ್ಕೆ ಸಾಕಷ್ಟು ವ್ಯತಿರಿಕ್ತವಾಗಿಯೇ, ಪೊಲೀಸ್ ಮಹಾನಿರ್ದೇಶಕರು, ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಅಂಡ್ ಗವರ್ನಮೆಂಟ್ ಲಿಟಿಗೇಷನ್ ಹಾಗೂ ಕಾನೂನು ಇಲಾಖೆಯ ಶಿಫಾರಸ್ಸಿನ ಹೊರತಾಗಿಯೂ, ರಾಜ್ಯ ಸರ್ಕಾರವು ಹಾಲಿ ಬಿಜೆಪಿಯ ಸಂಸದರು, ಶಾಸಕರು ಮತ್ತು ಇತರೆ ಬಿಜೆಪಿ ನಾಯಕರ ವಿರುದ್ಧ ಬಾಕಿ ಇರುವ 62 ಅಪರಾಧ ಪ್ರಕರಣಗಳನ್ನು ಹಿಂಪಡೆಯಲು ನಿರ್ಧರಿಸಿದೆ ಎಂಬುದನ್ನು ಗಮನಿಸತಕ್ಕದ್ದು.

**ಊ) ಬಂಧನೋತ್ತರ ಕಾರ್ಯವಿಧಾನಗಳ ಉಲ್ಲಂಘನೆ:** ಆರೋಪಿಗಳನ್ನು ದೈಹಿಕವಾಗಿ ಹಾಜರುಪಡಿಸುವುದು, ಮತ್ತು ವಿಡಿಯೋ ವಿಚಾರಣೆ ನಿಯಮಗಳ ಪಾಲನೆಯಲ್ಲೂ ಲೋಪಗಳಾಗಿವೆ. ಬಂಧನಕ್ಕೊಳಗಾದವರನ್ನು ಪೊಲೀಸರ ವಶಕ್ಕೆ ಒಪ್ಪಿಸುವಲ್ಲಿ ಮ್ಯಾಜಿಸ್ಟ್ರೇಟ್ ಅವರು ಬಹಳ ಯಾಂತ್ರಿಕವಾಗಿ ಕಾರ್ಯವೆಸಗಿರುವಂತೆ ಕಂಡುಬಂದಿದ್ದು, ವಿಚಾರಪೂರ್ವಕವಾಗಿ ಕ್ರಮ ಕೈಗೊಂಡಿರುವಂತೆ ಕಂಡುಬರುವುದಿಲ್ಲ.

**ಎ) ಸಾಮಾಜಿಕ ಮಾಧ್ಯಮದ ಪಾತ್ರ:** ದ್ವೇಷ ಪೂರಿತವಾಗಿದ್ದ ನವೀನ್ ಅವರ ಪೋಸ್ಟ್ ವಿರುದ್ಧ ಕ್ರಮ ತೆಗೆದುಕೊಳ್ಳುವಲ್ಲಿ ಫೇಸ್‌ಬುಕ್ ವಿಫಲವಾಗಿದೆ. ಕೆಲವು ಮಾಧ್ಯಮ ಸಂಸ್ಥೆಗಳು ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿಕೊಂಡು, ಪಿತೂರಿ ಸಿದ್ಧಾಂತಗಳನ್ನು ಹೊಸೆಯುವ ಮೂಲಕ ಈ ಘಟನೆಯನ್ನು ಕೋಮು ಬೆಳಕಿನಲ್ಲಿ ತಪ್ಪಾಗಿ ಚಿತ್ರಿಸಿವೆ. ಇದಲ್ಲದೆ, ನವೀನ್ ಪೋಸ್ಟ್ ಕುರಿತು ಮತ್ತು ಆಗಸ್ಟ್ 11ರ ಘಟನೆಗಳ ಕುರಿತು ವಿವಿಧ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಸಾರವಾದ ಮಾಹಿತಿಯನ್ನು ವಿವರವಾದ ವಿಶ್ಲೇಷಣೆ ಗುರಿಪಡಿಸಲಾಯಿತು. ಇದರಲ್ಲಿ ಕಂಡುಬಂದ ಒಂದು ಮುಖ್ಯ ಅಂಶವೆಂದರೆ, ಸಾವಿರಾರು ಅನುಯಾಯಿಗಳನ್ನು ಹೊಂದಿರುವ ಮುಸ್ಲಿಮರ ಹಲವಾರು ಇನ್‌ಸ್ಟಾಗ್ರಾಮ್ ಖಾತೆಗಳು, ಜನರನ್ನು ಮನೆಯ ಒಳಗೇ ಇರುವಂತೆ ಮತ್ತು ಉದ್ವಿಗ್ನತೆಗೆ ಉತ್ತೇಜನ ನೀಡದಂತೆ ಒತ್ತಾಯಿಸಿರುವುದು ಕಂಡುಬಂದಿದೆ. ಹಲವು ಪ್ರಭಾವಿಶಾಲಿ ವ್ಯಕ್ತಿಗಳು ಹಾಗೂ ಬಲಪಂಥೀಯ ನಾಯಕರ ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ತಪ್ಪು ಮಾಹಿತಿಗಳನ್ನು ಮತ್ತು

ಆಯ್ದ ಸಂಗತಿಗಳನ್ನು ಕ್ಷಿಪ್ರವಾಗಿ ಹರಡಲಾಯಿತು. ಇವು ಜನರಲ್ಲಿ ಮುಸ್ಲಿಮರ ಬಗ್ಗೆ ದ್ವೇಷ ಮೂಡಿಸುವಂತಹ ಹಾಗೂ ಜನರನ್ನು ವಿಭಜಿಸುವಂತಹ ಹೇಳಿಕೆಗಳನ್ನು ಒಳಗೊಂಡಿದ್ದವು.

**ಏ) ಮುಖ್ಯವಾಹಿನಿ ಮಾಧ್ಯಮದ ಪಾತ್ರ:** ಕೆಲವು ಇಂಗ್ಲೀಷ್ ಮುದ್ರಣ ಮಾಧ್ಯಮವನ್ನು ಹೊರತುಪಡಿಸಿ ಬಹುತೇಕ ಎಲ್ಲ ಇಂಗ್ಲೀಷ್ ಮತ್ತು ಕನ್ನಡದ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳು ಆಗಸ್ಟ್ 11ರ ಘಟನೆಯನ್ನು ವರದಿಮಾಡುವಲ್ಲಿ ಪೂರ್ವಾಗ್ರಹಪೀಡಿತವಾಗಿ ವರ್ತಿಸಿವೆ. ವರದಿಯಾದ ಅನೇಕ ಮಾಹಿತಿಗಳು ಸತ್ಯಕ್ಕೆ ದೂರವಾಗಿದ್ದು, ಪಕ್ಷಪಾತದಿಂದ ಕೂಡಿವೆ ಮತ್ತು ಆಧಾರರಹಿತವಾಗಿವೆ. ಕೆಲವು ಇಂಗ್ಲಿಷ್ ಮುದ್ರಣ ಮಾಧ್ಯಮಗಳು ವಿವಿಧ ಮಗ್ಗುಲುಗಳಿಂದ ಘಟನೆಯನ್ನು ಪ್ರಸ್ತುತಪಡಿಸಲು ಯತ್ನಿಸಿದ್ದು, ಅಕ್ರಮವಾಗಿ ಬಂಧಿಸಲ್ಪಟ್ಟ ಜನರ ನೋವುಗಳನ್ನು ಎತ್ತಿ ತೋರಿಸಿದವು. ವರದಿಗಳಲ್ಲಿದ್ದ ಆಧಾರರಹಿತ ಊಹಾಪೋಹಗಳು ಮತ್ತು ಮುಸ್ಲಿಂ ವಿರೋಧಿ ಧೋರಣೆಗಳು ಪ್ರತಿನಿತ್ಯವೂ ಪಿತೂರಿ ಸಿದ್ಧಾಂತಗಳು ಉತ್ಪಾದನೆಯಾಗುವಂತೆ ಮಾಡಿದವು. ಮಾಧ್ಯಮಗಳು ನಡೆಸಿದ ವಿಚಾರಣೆಗಳು ಬಂಧನಕ್ಕೊಳಗಾದವರನ್ನು ನ್ಯಾಯಯುತ ವಿಚಾರಣೆಯ ಹಕ್ಕಿನಿಂದ ವಂಚಿಸಿತು. ಅಪರಾಧ ನ್ಯಾಯಶಾಸ್ತ್ರದ ಮೂಲಭೂತ ತತ್ವಗಳನ್ನು ಗಾಳಿಗೆ ತೂರಿದ ಮಾಧ್ಯಮ ವಿಚಾರಣೆಗಳು ಅಪರಾಧ ಸಾಬೀತು ಆಗುವವರೆಗೂ ಆರೋಪಿಯು ನಿರಪರಾಧಿ ಎನ್ನುವ ಮೂಲಭೂತ ಹಕ್ಕಿಗೂ ಚ್ಯುತಿ ತಂದಿತು. ಇಡೀ ಪ್ರದೇಶದ ಮುಸ್ಲಿಂ ಸಮುದಾಯವನ್ನು ಅಪರಾದಿಗಳಂತೆ ಚಿತ್ರಿಸಿತು. ಈ ಘಟನೆಯು ಪೂರ್ವನಿಯೋಜಿತವಾದ ಕೋಮುಗಲಭೆ ಎಂಬ ಆಧಾರರಹಿತ ಸುಳ್ಳು ಸುದ್ದಿಯನ್ನು ಪ್ರಚೋದನಕಾರಿಯಾಗಿ ಮಂಡಿಸಲಾಯಿತು.

ಕನ್ನಡ ಮಾಧ್ಯಮ ಬಹುತೇಕ ಸಂಸ್ಥೆಗಳು ತನ್ನ ಓದುಗರು ಮತ್ತು ನೋಡುಗರಲ್ಲಿ ಮುಸ್ಲಿಂ ವಿರೋಧಿ ಭಾವನೆಯನ್ನು ಬಿತ್ತಿ ಬೆಳೆಸಲು ಯತ್ನಿಸಿದವು ಎನ್ನುವುದು ಈ ವಿಶ್ಲೇಷಣೆಯಿಂದ ಸ್ಪಷ್ಟವಾಗಿದೆ. ವಸ್ತುನಿಷ್ಠತೆಯಿಂದ ದೂರಸರಿದ ಈ ಮಾಧ್ಯಮಗಳ ವರದಿಗಾರಿಕೆಯು, ಪತ್ರಿಕೋದ್ಯಮದಲ್ಲಿ ಇರಬೇಕಾದ ಸಹಜ ಸಂದೇಹವನ್ನೂ ಕೈಬಿಟ್ಟು ಕೋಮುವಾದಿ ಕಾರ್ಯಸೂಚಿಯನ್ನು ಅತ್ಯಂತ ನಿರ್ದಯವಾಗಿ ಹರಡಲು ಪ್ರಯತ್ನಿಸಿತು.

**ಐ) ಹಿಂಸಾಚಾರದ ನಂತರದ ರಾಜಕೀಯ ಪರಿಣಾಮ:** ಹಿಂಸಾಚಾರವು ಆಕಸ್ಮಿಕ ಘಟನೆಯಾಗಿದ್ದರೂ ಕೂಡ ರಾಜಕೀಯ ಶಕ್ತಿಗಳು ಇದನ್ನು ತಮ್ಮ ತಕ್ಷಣದ ರಾಜಕೀಯ ಲಾಭಕ್ಕೆ ಹಾಗೂ ದೀರ್ಘಾವಧಿ ಕೋಮು ರಾಜಕೀಯ ಧ್ರುವೀಕರಣಕ್ಕೆ ಬಳಸಿಕೊಂಡಿರುವುದು ಕಂಡುಬರುತ್ತದೆ. ಬಲಪಂಥೀಯ ಶಕ್ತಿಗಳಿಂದ ದಾಳಿಯನ್ನು ಎದುರಿಸುತ್ತಿರುವ ಹಾಗೂ ಪ್ರಜಾಪ್ರಭುತ್ವ ಸಂಸ್ಥೆಗಳಿಂದ ಅಸುರಕ್ಷತೆಯನ್ನು ಅನುಭವಿಸುತ್ತಿರುವ ಮುಸ್ಲಿಂ ಸಮುದಾಯದ ನಡುವೆ ಆಳವಾದ ನಿರಾಸೆ ಮನೆಮಾಡಿದೆ. ಇದನ್ನು ಬಲಪಡಿಸುವ, ಬಳಸಿಕೊಳ್ಳುವ ಯತ್ನಗಳು ನಡೆದಿವೆ. ಸಮಾಜವನ್ನು ಧಾರ್ಮಿಕ ನೆಲೆಯಲ್ಲಿ ಒಡೆಯಲು ಯತ್ನಿಸುತ್ತಿರುವ ಆರ್‌ಎಸ್‌ಎಸ್ ಮತ್ತು ಭಜರಂಗದಳದಂತಹ ಶಕ್ತಿಗಳು ಹಿಂದು ಸಮುದಾಯವನ್ನು ಬಲಿಪಶುಗಳಂತೆ ಚಿತ್ರಿಸುತ್ತಾ ಈ ಹಿಂಸಾಚಾರಕ್ಕೂ ಕೋಮು ಬಣ್ಣವನ್ನು ನೀಡಲು ಪ್ರಯತ್ನಿಸುತ್ತಿವೆ. ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿರುವ ಆರ್‌ಎಸ್‌ಎಸ್ / ಬಿಜೆಪಿಯ ತಂಡಗಳು ಹಿಂದು ಕುಟುಂಬಗಳನ್ನು ಮಾತ್ರ ಸಂಪರ್ಕ ಮಾಡುತ್ತಿದ್ದು ಅವರಿಗೆ ಕಾನೂನಿನ ನೆರವು ಮತ್ತು ಪರಿಹಾರದ ನೆರವು ಒದಗಿಸಲು ಸಹಾಯ ಮಾಡುತ್ತಿವೆ. ಈ ಪ್ರದೇಶದ ದಲಿತ ಕುಟುಂಬಗಳ ನಡುವೆ ಹೆಚ್ಚುತ್ತಿರುವ ಆರ್‌ಎಸ್‌ಎಸ್‌ನ ಉಪಸ್ಥಿತಿ ಮತ್ತು ಪ್ರಭಾವವು ಈ ಪ್ರದೇಶವನ್ನು ಕೋಮುವಾದಿ ನೆಲೆಯಲ್ಲಿ ಧ್ರುವೀಕರಿಸುವ ರಾಜಕೀಯ ಉದ್ದೇಶವನ್ನು ಸೂಚಿಸುತ್ತದೆ.

ಯುಎಪಿಎ ಕಾಯಿದೆಯ ಅನಿಯಂತ್ರಿತ ಬಳಕೆ ಮತ್ತು ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ಒಪ್ಪಿಸುವ ಪ್ರಸ್ತಾಪವು ರಾಜ್ಯ ಸರ್ಕಾರವೂ ಇಡೀ ಮುಸ್ಲಿಂ ಸಮುದಾಯವನ್ನು ದೇಶದ್ರೋಹಿಗಳಂತೆ ಕಾಣಿಸುವ ಪ್ರಯತ್ನ ಮಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಗಲಭೆ ಮತ್ತು ಹಿಂಸಾಚಾರಕ್ಕೆ ಕಾರಣವಾದ ಫೇಸ್‌ಬುಕ್ ಪೋಸ್ಟ್ ಕುರಿತು ವಿಚಾರಣೆಯನ್ನು ನಡೆಸುವ ಬದಲು ಹಾಗೂ ಗಲಭೆಯಲ್ಲಿ ತೊಡಗಿದ ನಿಜವಾದ ಅಪರಾಧಿಗಳನ್ನು ಬಂಧಿಸಿ ವಿಚಾರಣೆ ನಡೆಸುವ ಬದಲು ಈ ಹಿಂಸಾಚಾರವನ್ನು ಸಂಕುಚಿತ ಲಾಭಕ್ಕೆ ಬಳಸಿಕೊಳ್ಳುವ, ಒಂದು ಸಮುದಾಯವನ್ನು ದೋಷಿಯನ್ನಾಗಿಸುವ, ದ್ವೇಷವನ್ನು ಹರಡುವ ಪ್ರತ್ಯೇಕಿಸುವ, ಒಂಟಿಯಾಗಿಸುವ ಧಾವಂತ ಕಂಡುಬಂದಿದೆ.

**ಶಿಫಾರಸ್ಸುಗಳು**

ಈ ಮೇಲೆ ಕಂಡುಕೊಂಡ ಸತ್ಯಾಂಶಗಳ ಆಧಾರದ ಮೇಲೆ ಸತ್ಯ ಶೋಧನ ಸಮಿತಿಯು ಈ ಕೆಳಕಂಡ ಶಿಫಾರಸ್ಸುಗಳನ್ನು ಮಂಡಿಸುತ್ತದೆ:

**ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳು:**

1. ಫೇಸ್‌ಬುಕ್‌ನಲ್ಲಿ ನವೀನ್ ಹಾಕಿದ ಪೋಸ್ಟ್ ಕುರಿತ ತನಿಖೆಯ ವ್ಯಾಪ್ತಿಯನ್ನು ವಿಸ್ತರಿಸಬೇಕು ಹಾಗೂ ನವೀನ್ ವಿರುದ್ಧ ಶೀಘ್ರಕ್ರಮ ಕೈಗೊಳ್ಳದಿರುವ ಪೊಲೀಸರ ವೈಫಲ್ಯವನ್ನು ತನಿಖೆಯ ವ್ಯಾಪ್ತಿಗೆ ಸೇರಿಸಬೇಕು.
2. ಗಲಭೆ ನಿರತ ಗುಂಪಿನ ಜೊತೆಗೆ ಮಾತುಕತೆ ನಡೆಸುವಲ್ಲಿನ ಹಾಗೂ ಗಲಭೆಯನ್ನು ನಿಯಂತ್ರಿಸುವಲ್ಲಿನ ಪೊಲೀಸರ ವೈಫಲ್ಯ ಕುರಿತೂ ತನಿಖೆಗೆ ಆದೇಶಿಸಬೇಕು.
3. ಗಲಭೆಯ ಕುರಿತು ಮುನ್ಸೂಚನೆ ನೀಡುವಲ್ಲಿ ಹಾಗೂ ಗಲಭೆ ನಿಯಂತ್ರಣದಲ್ಲಿ ವಿಫಲವಾದ ಗುಪ್ತಚರ ಇಲಾಖೆಯ ಕಾರ್ಯವೈಖರಿಯನ್ನೂ ತನಿಖೆಗೆ ಒಳಪಡಿಸಬೇಕು.
4. ಗಲಭೆ ಸಂಭವಿಸಿದ ಎರಡು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾಮಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ನಡೆಸಬೇಕು. ಕೊರೊನ ಲಾಕ್‌ಡೌನ್ ಕಾರಣದಿಂದ ಈ ಪ್ರದೇಶದಲ್ಲಿ ಉಂಟಾಗಿರುವ ಉದ್ಯೋಗ ನಷ್ಟ, ಜೀವನೋಪಾಯ ನಷ್ಟ, ಆರೋಗ್ಯದ ಸಮಸ್ಯೆಗಳು ಮತ್ತು ಪೌಷ್ಟಿಕಾಂಶದ ಕೊರತೆಯನ್ನು ಅಂದಾಜುಮಾಡಬೇಕು. ಈ ಕೊರತೆಗಳನ್ನು ತುಂಬಿಕೊಡಲು ಮಾನವೀಯ ನೆಲೆಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು.
5. ನ್ಯಾಯಮೂರ್ತಿ ರಾಜಿಂದರ್ ಸಾಚಾರ್ ಸಮಿತಿಯ ವರದಿಯನ್ನು ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಇರುವ 15 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಬೇಕು.
6. ಮುಸ್ಲಿಮರ ಬಗೆಗೆ ಹರಡುತ್ತಿರುವ ದ್ವೇಷ ಮತ್ತು ಭೀತಿಯನ್ನು ತಡೆಗಟ್ಟಲು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು. ಮುಸ್ಲಿಮರ ಕುರಿತು ಹರಡುತ್ತಿರುವ ಸುಳ್ಳುಗಳು, ತಪ್ಪು ಮಾಹಿತಿಗಳು ಈ ಸಮುದಾಯವನ್ನು ಪ್ರತ್ಯೇಕಿಸುತ್ತಿದೆ ಹಾಗೂ ಏಕಾಂಗಿಯಾಗಿಸುತ್ತಿದೆ. ಸಮಾಜದಲ್ಲಿ ಎಲ್ಲ ಸಮುದಾಯಗಳ ನಡುವೆ ಸೌಹಾರ್ದತೆಯನ್ನು ಮತ್ತು ಸಹೋದರತೆಯ ಭಾವವನ್ನು ಮೂಡಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಹಾಗೂ ಸಮಾಜದ ಸ್ವಾಸ್ಥ್ಯವು ಮತ್ತಷ್ಟು ಹಾಳಾಗದಂತೆ ಕ್ರಮ ವಹಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ.
7. ಎಲ್ಲ ಸಮುದಾಯಗಳ ಸದಸ್ಯರನ್ನು ಒಳಗೊಂಡಂತಹ ಶಾಂತಿ ಮತ್ತು ಸೌಹಾರ್ದ ಸಮಿತಿಗಳನ್ನು ರಚನೆ ಮಾಡಬೇಕು.
8. ಅಪರಾಧ ಚಟುವಟಿಕೆ ನಿಯಂತ್ರಣ ಕಾಯಿದೆಯ (ಯು.ಎ.ಪಿ.ಎ.) ಅಡಿಯಲ್ಲಿ ಆಪಾದಿತರ ವಿರುದ್ಧ ಹೇರಲಾಗಿರುವ ಆಪಾದನೆಗಳನ್ನು ಈ ಕೂಡಲೇ ಕೈಬಿಡಬೇಕು.
9. ಇಡೀ ಪ್ರಕರಣದ ಕುರಿತು ಪಾರದರ್ಶಕವಾಗಿ, ಕಾನೂನಿನಲ್ಲಿ ವಿಷದಪಡಿಸಿರುವ ನಿಯಮಗಳ ಅನುಸಾರವೇ ಸಮಗ್ರವಾದ ತನಿಖೆ ನಡೆಸಬೇಕು. ಆಪಾದಿತರ ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಹಾಗೂ ಆರೋಪ ಸಾಬೀತಾಗುವವರೆಗೂ ಅವರು ನಿರಪರಾಧಿಗಳು ಎಂಬ ಅಂಶವನ್ನು ಗೌರವಿಸಬೇಕು.
10. ಬಂಧನ ಪ್ರಕ್ರಿಯೆ ಕುರಿತು ತನಿಖೆ ನಡೆಸಬೇಕು ಹಾಗೂ ನಿರಪರಾಧಿಗಳನ್ನು ಕೂಡಲೆ ಬಿಡುಗಡೆ ಮಾಡಬೇಕು.
11. ಗಲಭೆಯ ಸಂದರ್ಭದಲ್ಲಿ ಆದ ನಷ್ಟವನ್ನು ಅಪರಾಧಿಗಳಿಂದಲೇ ವಸೂಲಿ ಮಾಡುವ ಪ್ರಕ್ರಿಯೆಯನ್ನು ಪ್ರಕರಣದ ತನಿಖೆ ಪೂರ್ಣಗೊಂಡು ತಪ್ಪಿತಸ್ಥರನ್ನು ಗುರುತಿಸಿದ ನಂತರವಷ್ಟೇ ಆರಂಭಿಸಬೇಕು. ನಷ್ಟ ವಸೂಲಿ ಪ್ರಕ್ರಿಯೆಯು ಯಾವುದೇ ರೀತಿಯಲ್ಲಿ ನ್ಯಾಯದಾನ ಪ್ರಕ್ರಿಯೆಯ ಮೇಲೆ ಹಾಗೂ ನಿರಪರಾಧಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರದ ಹಾಗೆ ಎಚ್ಚರವಹಿಸಬೇಕು.
12. ನಿರಂಕುಶ ಬಂಧನ ಕ್ರಮಗಳಿಂದ ಭೀತಿಗೆ ಒಳಗಾಗಿರುವ ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಮತ್ತು ಕಾವಲ್‌ಭೈರಸಂದ್ರದ ನಿವಾಸಿಗಳಲ್ಲಿ ಪೊಲೀಸ್ ಇಲಾಖೆ ಕುರಿತು ಮೂಡಿರುವ ಭೀತಿಯನ್ನು ನಿವಾರಿಸಲು ಹಾಗೂ ಸರ್ಕಾರದ ವ್ಯವಸ್ಥೆ ಕುರಿತು ಪುನಃ ವಿಶ್ವಾಸ ಮೂಡಿಸಲು ಸರ್ಕಾರವು ಚಿಕಿತ್ಸಕ ಕ್ರಮಗಳನ್ನು ಕೈಗೊಳ್ಳಬೇಕು.
13. ದ್ವೇಷಪೂರಿತ ಮಾತುಗಳನ್ನು ಆಡಿದ ಶಾಸಕರ ವಿರುದ್ಧ ಅಪರಾಧ ನೀತಿ ಸಂಹಿತೆ ಅನ್ವಯ ಕ್ರಮ ಕೈಗೊಳ್ಳಬೇಕು.

14. 62 ಜನ ಚುನಾಯಿತ ಪ್ರತಿನಿಧಿಗಳ ವಿರುದ್ಧ ದಾಖಲಾಗಿದ್ದ ಅಪರಾಧ ಪ್ರಕರಣಗಳನ್ನು ಕೈಬಿಡುವ ನಿರ್ಧಾರವನ್ನು ಸರ್ಕಾರ ಹಿಂದಕ್ಕೆ ಪಡೆಯಬೇಕು ಹಾಗೂ ಈ ಪ್ರಕರಣಗಳ ತನಿಖೆಯನ್ನು ತ್ವರಿತಗೊಳಿಸಿ, ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು.

**ಪೊಲೀಸ್ ಇಲಾಖೆಗೆ ಸಂಬಂಧಿಸಿದ ಶಿಫಾರಸ್ಸುಗಳು:**

1. ಆದಷ್ಟು ಶೀಘ್ರವಾಗಿ ಪ್ರಾಥಮಿಕ ವಿಚಾರಣೆಯನ್ನು ನಡೆಸಿ, ನಿರಪರಾಧಿಗಳನ್ನು ತ್ವರಿತವಾಗಿ ಬಿಡುಗಡೆ ಮಾಡಬೇಕು.
2. ಆಪಾದಿತರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ಹಾಗೂ ಆಪಾದಿತರನ್ನು ಎಲ್ಲಿ ಬಂಧನದಲ್ಲಿ ಇಡಲಾಗಿದೆ ಎಂಬ ವಿವರವನ್ನು ಅವರ ಕುಟುಂಬಗಳಿಗೆ ಒದಗಿಸಬೇಕು.
3. ಆರೋಪಿಗಳ ತನಿಖೆ ಪೂರ್ವ ಹತ್ಯೆಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ಪಿಯುಸಿಎಲ್ ಮತ್ತು ಮಾರಾರಾಷ್ಟ್ರ ರಾಜ್ಯ ಸರ್ಕಾರ ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಪಾಲಿಸಬೇಕು.

**ಮಾಧ್ಯಮಗಳಿಗೆ ಸಂಬಂಧಿಸಿದ ಶಿಫಾರಸ್ಸುಗಳು:**

1. ಸಮೂಹ ಮಾಧ್ಯಮಗಳಲ್ಲಿ, ಅದರಲ್ಲೂ ಪ್ರಮುಖವಾಗಿ ದೃಶ್ಯ ಮಾಧ್ಯಮದಲ್ಲಿ ಸ್ವಯಂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಗಂಭೀರವಾದ ಚರ್ಚೆ ನಡೆಸಬೇಕು.
2. ಗಲಭೆಗಳಿಗೆ ಸಂಬಂಧಿಸಿದಂತೆ ಉದ್ರೇಕಕಾರಿ ಹಾಗೂ ಪ್ರಚೋದನಾತ್ಮಕ ವರದಿಗಾರಿಕೆಯನ್ನು ನಿಲ್ಲಿಸಬೇಕು.
3. ಮಾಧ್ಯಮ ವರದಿಯ ಸತ್ಯಾಸತ್ಯತೆಯನ್ನು ಕೂಲಂಕುಷವಾಗಿ ಪರಿಶೀಲಿಸುವ, ಪ್ರಚೋದನೆ ಮಾಡಬಹುದಾದ ವರದಿಗಳನ್ನು ನಿಯಂತ್ರಿಸುವ ನೀತಿ–ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

**ಸಮಯದಾಯದ ಮುಖ್ಯಸ್ಥರಿಗೆ ಸಲಹೆ:**

1. ಬಹುತ್ವ, ಸಹಜೀವನ ಮತ್ತು ಕಾಳಜಿ ಎನ್ನುವುದು ಆರೋಗ್ಯಕರ ಸಮಾಜದ ಲಕ್ಷಣಗಳು. ಇವು ನಮ್ಮ ಸಂವಿಧಾನದ ಮತ್ತು ಪ್ರಜಾಪ್ರಭುತ್ವದ ಬುನಾದಿಯೂ ಹೌದು. ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲು ಧಾರ್ಮಿಕ ಶ್ರದ್ಧೆಯು ಹೇಗೆ ಸಹಕಾರಿಯಾಗಬಲ್ಲದು ಎಂಬುದರ ಕುರಿತು ಎಲ್ಲ ಸಮುದಾಯಗಳ ಯುವಜನರ ನಡುವೆ ಆರೋಗ್ಯಕರ ಚರ್ಚೆಯನ್ನು ನಡೆಸಬೇಕು.

**ಸತ್ಯಶೋಧನೆ ಸಮಿತಿಯ ತಂಡ:**

ನೀನಾ ನಾಯಕ್, (ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಮಾಜಿ ಅಧ್ಯಕ್ಷೆ ಮತ್ತು ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗದ ಮಾಜಿ ಸದಸ್ಯೆ), ಸಿಂಥಿಯಾ ಸ್ಟೀಫನ್ (ಸ್ವತಂತ್ರ ಪತ್ರಕರ್ತರು ಮತ್ತು ಸಂಶೋಧಕರು) ವಿ. ನಾಗರಾಜ್ (ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರು, ಸಂಯೋಜಕ) ಮೋಹನ್‌ರಾಜ್ (ದಲಿತ ಸಂಘರ್ಷ ಸಮಿತಿ, ಭೀಮವಾದದ ರಾಜ್ಯ ಸಂಚಾಲಕರು) ವಕೀಲ ನಿಯಾಜ್ ಮೂಸ (ನಗರಿಕ ಹಕ್ಕುಗಳ ಹಿತರಕ್ಷಣಾ ಸಮಿತಿ, ಕರ್ನಾಟಕ) ಲಿಯೋ ಸಲ್ಡಾನ (ಪರಿಸರ ನೆರವು ಸಮಿತಿ, ಸಂಚಾಲಕರು) ಗೀತಾ ಮೆನನ್ (ಸ್ತ್ರೀ ಜಾಗೃತಿ ಸಮಿತಿ) ಪ್ರೊ. ವೈ ಜೆ ರಾಜೇಂದ್ರ (ಅಧ್ಯಕ್ಷರು, ಪಿಯುಸಿಎಲ್, ಕರ್ನಾಟಕ) ಇರ್ಷಾದ್ ಅಹಮದ್ ದೇಸಾಯಿ (ಮೂವ್‌ಮೆಂಟ್ ಫಾರ್ ಜಸ್ಟೀಸ್) ಮನು ಚೌಧರಿ ಮತ್ತು ಮಧು ಭೂಷಣ್ (ಗಮನ ಮಹಿಳಾ ಸಮೂಹ) ಹೆಬ್ಬಾಳ ವೆಂಕಟೇಶ್ (ದಲಿತ ಸಂಘರ್ಷ ಸಮಿತಿ, ರಾಜ್ಯ ಸಂಚಾಲಕರು) ವಿಜಯ್ ಕುಮಾರ್ ಸೀತಪ್ಪ (ಸ್ವರಾಜ್ ಅಭಿಯಾನ, ಕರ್ನಾಟಕ) ಫಿರ್ದೋಸ್ ಖಾನ್ (ಫಾರ್ವರ್ಡ್ ಟ್ರಸ್ಟ್) ಗಾಂಧಿಮತಿ ಕೆ. (ಅಖಿಲ ಭಾರತ ಪ್ರಗತಿಪರ ಮಹಿಳೆಯರ ಸಂಘಟನೆ) ತನ್ವೀರ್ ಅಹಮದ (ಮೂವ್ಮೆಂಟ್ ಫಾರ್ ಜಸ್ಟೀಸ್) ಷಣ್ಮುಗಂ ಪಿ (ಪೀಪಲ್ಸ್ ಡೆಮಾಕ್ರಟಿಕ್ ಫೋರಂ) ಸ್ವಾತಿ ಶೇಷಾದ್ರಿ (ಆಲ್ ಇಂಡಿಯಾ ಪೀಪಲ್ಸ್ ಫೋರಂ) ಮಲ್ಲಿಗೆ (ಕರ್ನಾಟಕ ಜನಶಕ್ತಿ) ಆಲ್ವಿನ್ ಡಿಸೋಜಾ (ಇಂಡಿಯನ್ ಸೋಷಿಯಲ್ ಇನ್‌ಸ್ಟಿಟ್ಯೂಟ್) ಡಾ. ಸಿದ್ದಾರ್ಥ ಜೋಷಿ (ಸಂಶೋಧಕರು) ಗಣೇಶ್ ಜಿ. (ಪೀಪಲ್ಸ್ ಡೆಮಾಕ್ರೆಟಿಕ್ ಫೋರಂ) ಮತ್ತು ಶಿಲ್ಪಾ ಪ್ರಸಾದ್ (ನ್ಯಾಯಕ್ಕಾಗಿ ಅಖಿಲ ಭಾರತ ವಕೀಲರ ಸಂಘಟನೆ).

***